ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/ 10 /ಎಸಿಎಂ(2)/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 22-05-2018.

## -:: ಪ್ರವೇಶಾಧಿಸೂಚನೆ ::-

ವಿಷಯ: **2018-19ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಜೆ.ಎಸ್.ಎಸ್ ವಿಶೇಷಚೇತನರ ಅಭ್ಯರ್ಥಿಗಳಿಗೆ (Differently Abled) ಅರ್ಜಿಗಳ ವಿತರಣೆ ಮತ್ತು ಸ್ವೀಕರಿಸುವ ಬಗ್ಗೆ.**

ಉಲ್ಲೇಖ: ಸರ್ಕಾರದ ಆದೇಶ ಸಂ. ಇಡಿ 207 ಟಿಜಿಎಲ್ 2016, ದಿ:20-03-2017.

-00000000-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, **ಜೆ.ಎಸ್.ಎಸ್ ವಿಶೇಷಚೇತನರ ಪಾಲಿಟೆಕ್ನಿಕ್, ಮೈಸೂರು (ಅನುದಾನಿತ)** ಈ ಸಂಸ್ಥೆಯಲ್ಲಿನ ಡಿಪ್ಲೋಮಾ ಕೋರ್ಸುಗಳಿಗೆ **Orthopedically Handicapped, Hearing Impaired & Visually Impaired** ಎಸ್.ಎಸ್.ಎಲ್.ಸಿ ಉತ್ತೀರ್ಣರಾದ ವಿಶೇಷಚೇತನರ (Differently Abled) ಅಭ್ಯರ್ಥಿಗಳ ಪ್ರವೇಶಕ್ಕೆ ಅವಕಾಶವಿರುತ್ತದೆ.

ಅದರಂತೆ, 2018-19ನೇ ಸಾಲಿನ ಪ್ರಥಮ ಡಿಪ್ಲೋಮಾ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಸ್ವೀಕರಿಸುವ ಅಂತಿಮ **ದಿ:15-06-2018** ಎಂದು ನಿಗಧಿಪಡಿಸಲಾಗಿರುತ್ತದೆ.

| ಕ್ರ. ಸಂ. | ಪ್ರವೇಶಕ್ಕೆ ಸಂಬಂಧಿಸಿದ ವಿವರ | | ಪ್ರವೇಶಕ್ಕೆ ಸಂಬಂಧಿಸಿದ ದಿನಾಂಕ |
|---|---|---|---|
| 1. | ಪ್ರವೇಶಕ್ಕೆ ಸಂಬಂಧಿಸಿದ ಅರ್ಜಿಗಳ ವಿತರಣೆ | - | 22-05-2018 ರಿಂದ 15-06-2018 |
| 2. | ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ | - | 15-06-2018 |

ಮೇಲೆ ನಮೂದಿಸಿರುವಂತೆ ಕೂಡಲೇ ಕ್ರಮ ತೆಗೆದುಕೊಂಡು ಈ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ನೀಡಿ, ನಿಯಮಗಳ ಪ್ರಕಾರ ಪ್ರವೇಶ ಪ್ರಕ್ರಿಯೆಯನ್ನು ಪ್ರಿನ್ಸಿಪಾಲರು ತಮ್ಮ ಹಂತದಲ್ಲಿಯೇ **OFF-LINE** ಮೂಲಕ ಪೂರ್ಣಗೊಳಿಸಲು ತಿಳಿಸಲಾಗಿದೆ. **ಸದರಿ ಸಂಸ್ಥೆಯು ವಿಶೇಷಚೇತನರ ಪಾಲಿಟೆಕ್ನಿಕ್ ಆಗಿರುವುದರಿಂದ ವಿಶೇಷಚೇತನ ಅಭ್ಯರ್ಥಿಗಳು ಪ್ರವೇಶ ಪಡೆಯಲು ಇದರ ಸದುಪಯೋಗಪಡಿಸಿಕೊಳ್ಳಲು ಈ ಮೂಲಕ ತಿಳಿಸಲಾಗಿದೆ.**

***ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂ. 0821-2548315, Email: jsspda@gmail.com / mailme@jsspda.rg & ವೆಬ್‌ಸೈಟ್ : www.jsspda.org ನ್ನು ಸಂಪರ್ಕಿಸುವುದು.***

ನಿರ್ದೇಶಕರು

22/05/18

**ಇವರಿಗೆ,**

*ಪ್ರಿನ್ಸಿಪಾಲರು, ಜೆ.ಎಸ್.ಎಸ್ ವಿಶೇಷಚೇತನರ ಪಾಲಿಟೆಕ್ನಿಕ್, ಮೈಸೂರು*

<u>ಪ್ರತಿ ಮಾಹಿತಿಗಾಗಿ:–</u>

1) ಜಂಟಿ ನಿರ್ದೇಶಕರು(ಆಡಳಿತ), ತಾಂ.ಶಿ.ನಿ, ಬೆಂಗಳೂರು.
2) ಕಾರ್ಯದರ್ಶಿಗಳು(ಪರೀಕ್ಷೆ), ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
3) ನಿರ್ದೇಶಕರ ಆಪ್ತಶಾಖೆಗೆ,
4) ಸಾರ್ವಜನಿಕ ಸಂಪರ್ಕಾಧಿಕಾರಿ, ತಾಂ.ಶಿ.ನಿ, ಬೆಂಗಳೂರು,
5) ಸಂಯೋಜನಾಧಿಕಾರಿಗಳು, ಇ–ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು – ಸದರಿ ಪ್ರವೇಶಾಧಿಸೂಚನೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
6) ಕಡತಕ್ಕೆ